

# ಗುಂಪಿನಲ್ಲಿ ಗೆಲ್ಲೋದು ಇಷ್ಟ

‘ಬರಹಗಾರರು ಪ್ರತಿದಿನ ಒಂದಾದರೂ ಪುಸ್ತಕ ಓದಬೇಕು; ಒಂದಾದರೂ ಸಿನಿಮಾ ನೋಡಬೇಕು. ಜೊತೆಗೆ ಜನರ ನಡುವೆ ಬೆರೆತು ಕಥೆ ಹುಡುಕಬೇಕು’ ಎಂಬ ನಂಬಿಕೆಯ ಕಥೆಗಾರ ಟಿ.ಕೆ. ದಯಾನಂದ್, ಕಥೆಯ ಚುಂಗು ಹಿಡಿದು ಬಾಲಿವುಡ್‌ನ ಹೊಸ್ತಿನಲ್ಲಿ ನಿಂತಿದ್ದಾರೆ.

■ ಪದ್ಮನಾಭ ಭಟ್

“ಅವತ್ತು ನಾನು ಯಾವುದೋ ಅಸೈನ್ಮೆಂಟಿಗೆಂದು ಕಾರವಾರಕ್ಕೆ ಹೋಗಿದ್ದೋನು ಬಾರ್‌ನಲ್ಲಿ ಕೂತಿದ್ದೆ. ಆಗ ಕೌಂಟರ್‌ನಲ್ಲಿ ಜಗಳ ಆಡುತ್ತಿದ್ದ ಆ ಮನುಷ್ಯ ಕಾಣಿಸಿದ. ಸುಮಾರು ಐವತ್ತರವತ್ತು ವರ್ಷ ಇರಬಹುದು. ‘ನಾಳೆ ಹಣ ಕೊಡ್ತೀನಿ. ಈಗ ಕುಡಿಯೋಕೆ ಕೊಡಿ’ ಎಂದು ಜಗಳ ಆಡ್ತಿದ್ದ. ನಾನು ಅವನನ್ನು ಕರೆದು ಕೂಡಿಸಿಕೊಂಡೆ. ಒಟ್ಟಿಗೇ ಕುಡಿದೆವು. ಸ್ವಲ್ಪ ಹೊತ್ತಾದ ನಂತರ ಅವನು ಇದ್ದಕ್ಕಿದ್ದ ಹಾಗೆ ಅಳಲು ಶುರುಮಾಡಿದ. ನಾನು ಅವನನ್ನು ಸಮಾಧಾನ ಮಾಡಿ ಏನಾಯ್ತು ಎಂದು ಕೇಳಿದೆ. ಆಗ ಅವನೊಂದು ಕಥೆ ಹೇಳ್ದ. ಅದೇ ಟೋಬಿ”

– ಹೀಗೆ ಕಥೆ ಸಿಕ್ಕ ಬಗ್ಗೆಯೇ ಒಂದು ರೋಚಕ ಕಥೆಯನ್ನು ಹೇಳಿದರು ಟಿ.ಕೆ. ದಯಾನಂದ್. ಹೀಗೆ ಜನರ ಹೃದಯದಿಂದಲೇ ಕಥೆಗಳನ್ನು ಕೊಂಡುತರುವುದು ಅವರ ಮನೋಧರ್ಮ. ‘ನಾನು ಕಥೆಗಳನ್ನು ಬರೆಯುವುದಿಲ್ಲ; ಸಂಗ್ರಹಿಸುತ್ತೇನೆ. ನನ್ನ ಕಣ್ಣೆದುರಿಗೆ ಬರುವ ಒಬ್ಬೊಬ್ಬ ಮನುಷ್ಯನೂ ನನಗೆ ಕಥೆಗಳ ಎನ್ಸೈಕ್ಲೊಪಿಡಿಯಾ ಹಾಗೆಯೇ ಕಾಣಿಸುತ್ತಾರೆ. ಅವರು ತಮ್ಮ ಕಥೆಗಳನ್ನು ಹೇಳಲು ತಹತಹಿಸುತ್ತಿದ್ದಾರೆ. ಆದರೆ ಕೇಳುವವರು ಯಾರೂ ಇರುವುದಿಲ್ಲ. ನಾವು ಕೇಳುತ್ತೇವೆ ಎಂದು ಗೊತ್ತಾದರೆ ಅದ್ಭುತ ಕಥೆಗಳನ್ನು ಹೇಳುತ್ತಾರೆ. ನಾನು ಜನರ ಕಥೆಗಳನ್ನು ಕೇಳುತ್ತೇನೆ. ಹಾಗಾಗಿ ನನಗೆಂದೂ ಕಥೆಗಳ ಬರ ಬಿದ್ದಿಲ್ಲ’ ಎಂದು ತನ್ನ ಕಥನಕ್ರಮದ ಬಗ್ಗೆ ಹೇಳುತ್ತಾರೆ ಅವರು.

ಅಂದಹಾಗೆ ಕಾರವಾರದ ಬಾರಿನಲ್ಲಿ ಸಿಕ್ಕ ‘ಟೋಬಿ’ ಕಥೆ ದಯಾನಂದ್ ಅವರನ್ನು ಬಾಲಿವುಡ್ ಬಾಗಿಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದೆ. ಕೆಲವು ಬಾಲಿವುಡ್ ನಟರು ಮತ್ತು ಕಾರ್ಪೊರೇಟ್ ಕಂಪನಿಗಳು ಸೇರಿಕೊಂಡು ಕಳೆದ ಐದು ವರ್ಷಗಳಿಂದ ‘ಸಿಗ್ನೇಚರ್ ಮಾಸ್ಟರ್ ಕ್ಲಾಸ್’ ಆಯೋಜಿಸುತ್ತಿದ್ದಾರೆ. ಪ್ರತಿಭಾವಂತರ ಹುಡುಕಾಟ ಈ ವೇದಿಕೆಯ ಉದ್ದೇಶ. ಕಲಾವಿದರು, ನಿರ್ದೇಶನ, ನಟನೆ ಹೀಗೆ ಒಂದೊಂದು ವರ್ಷ ಒಂದೊಂದು ವಿಭಾಗಗಳಲ್ಲಿ ಪ್ರತಿಭಾವಂತರ ಹುಡುಕಾಟವನ್ನು ಆ ವೇದಿಕೆ ಮಾಡುತ್ತದೆ. ಈ ವರ್ಷ ಕಥೆಗಳ ಹುಡುಕಾಟವನ್ನು ಥೀಮ್ ಆಗಿ ಇರಿಸಿಕೊಂಡಿತ್ತು. ಆಯುಷ್ಮಾನ್ ಖುರಾನಾ, ರಾಜ್‌ಕುಮಾರ್ ರಾವ್, ತಮನ್ನಾ, ಕುಬ್ರಾ ಶೇತ್ ಈ ವೇದಿಕೆಗೆ ಮೆಂಟರ್ ಆಗಿಯೂ ನಿರ್ಣಾಯಕರಾಗಿಯೂ ಕೆಲಸ ಮಾಡುತ್ತಾರೆ. ಈ ವರ್ಷ ಹೈದರಾಬಾದ್ ವಿಭಾಗದಲ್ಲಿ ಟಿ.ಕೆ. ದಯಾನಂದ್ ಅವರ ‘ಟೋಬಿ’ ಕಥೆ ಆಯ್ಕೆಯಾಗಿದೆ. ಇನ್ನು ಕೆಲವೇ ದಿನಗಳಲ್ಲಿ ನಡೆಯಲಿರುವ ಗ್ರ್ಯಾಂಡ್ ಫಿನಾಲೆಯಲ್ಲಿಯೂ ಆಯ್ಕೆಯಾದರೆ ‘ಟೋಬಿ’ ಕಥೆ ಬಾಲಿವುಡ್‌ನಲ್ಲಿ ಸಿನಿಮಾ ಆಗಿ ರೂಪುಗೊಳ್ಳಲಿದೆ.

‘ರೂಮ್‌ನಲ್ಲಿ ಕೂತು ‘ಕಥೆಯ ಮೇಲೆ ವರ್ಕ್ ಮಾಡುವ’ ರೀತಿಯಲ್ಲಿ ನನಗೆ ನಂಬಿಕೆ ಇಲ್ಲ. ಬೀದಿಗಳಲ್ಲಿ ಕಥೆಗಳು ಸಿಗುತ್ತವೆ’ ಎನ್ನುವ ದಯಾನಂದ್ ಅವರಿಗೆ, ‘ಅವು ಕಥೆಯ ಸ್ವರೂಪದಲ್ಲಿ ಇರುವುದಿಲ್ಲ. ಬಿಡಿಬಿಡಿಯಾಗಿರುತ್ತವೆ. ಅವುಗಳನ್ನು ಆಯ್ದುಕೊಂಡು ಒಂದು ಕಥೆಯ ಸ್ವರೂಪವನ್ನು ನೀಡುವ ಕೆಲಸವನ್ನು ನಾವು ಮಾಡಬೇಕು’ ಎಂಬ ಎಚ್ಚರವೂ ಇದೆ. ‘ರಸ್ತೆ ನಕ್ಷತ್ರ’ ಮತ್ತು ‘ರೆಕ್ಕೆ ಹಾವು’ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಿತರಾದ ದಯಾನಂದ್, ನಂತರ ‘ಬೆಂಕಿಪಟ್ಣ’ ಸಿನಿಮಾದ ಮೂಲಕ ನಿರ್ದೇಶಕರಾದರು. ಆದರೆ ಸಾಹಿತ್ಯ ಲೋಕದಲ್ಲಿ ಸಿಕ್ಕ ಅಕ್ಕರೆಯ ಸ್ವಾಗತ ಸಿನಿಮಾ ಜಗತ್ತಿನಲ್ಲಿ ಸಿಗಲಿಲ್ಲ. ಮೊದಲ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಸೋತು ಮಲಗಿತು. ನಂತರ ಅವರು ನಿರ್ದೇಶಕರ ಟೋಪಿಯನ್ನು ಎತ್ತಿ ಪಕ್ಕಕ್ಕಿಟ್ಟು, ಕೈಯಲ್ಲಿ ಪೆನ್ನು ಹಿಡಿದರು. ಈ ನಿರ್ಧಾರ ಎಷ್ಟು ಯೋಗ್ಯವಾಗಿತ್ತು ಎಂಬುದಕ್ಕೆ ಅವರು ಕಥೆ ಬರೆದ ‘ಬೆಲ್ ಬಾಟಂ’ ಸಿನಿಮಾ ಯಶಸ್ಸೇ ಸಾಕ್ಷಿ.

‘ನನಗೆ ಗುಂಪಿನಲ್ಲಿ ಗೆಲ್ಲುವುದು ಹೆಚ್ಚು ಖುಷಿ ಕೊಡುತ್ತದೆ. ನಿರ್ದೇಶಕನಾಗಿ ಹತ್ತಿಪ್ಪತ್ತು ವಿಭಾಗಗಳನ್ನು ಹೆಗಲ ಮೇಲೆ ಹೊತ್ತು ನಡೆಸುವುದು ಕಷ್ಟ. ‘ಬೆಲ್‌ಬಾಟಂ’ ಒಂದು ಸಾಮೂಹಿಕ ಗೆಲುವು. ಅಂಥ ಗೆಲುವುಗಳಲ್ಲೇ ನನಗೆ ಹೆಚ್ಚು ಖುಷಿ. ಹಾಗಾಗಿ ಸದ್ಯಕ್ಕಂತೂ ನಾನು ನಿರ್ದೇಶನದ ಕಡೆಗೆ ಗಮನ ಕೊಡಲಾರೆ’ ಎನ್ನುವ ಅವರು ಸದ್ಯಕ್ಕೆ ‘ಬೆಲ್ ಬಾಟಂ 2’ ಕಥೆ ಮುಗಿಸಿ, ಚಿತ್ರಕಥೆ ರಚನೆಯಲ್ಲಿ ಬ್ಯುಸಿ ಇದ್ದಾರೆ. ಜಯತೀರ್ಥ ನಿರ್ದೇಶನದ ‘ಬನಾರಸ್’ ಮತ್ತು ಸುಜಯ್ ಶಾಸ್ತ್ರಿ ನಿರ್ದೇಶನದ ಹೊಸ ಸಿನಿಮಾಗೂ ದಯಾನಂದ್ ಅವರೇ ಕಥೆ ಬರೆದಿದ್ದಾರೆ. ಮಂಸೋರೆ ಅವರ ‘ಆಕ್ಟ್ 1978’ ಸಿನಿಮಾಗೆ ಸಹ ಬರಹಗಾರರಾಗಿ ಕೆಲಸ ಮಾಡಿದ್ದಾರೆ. ಈ ವರ್ಷದ ಮಧ್ಯದಲ್ಲಿ ದಯಾನಂದ್ ಅವರ ಹೊಸ ಕಥಾಸಂಕಲನವೂ ಪ್ರಕಟಗೊಳ್ಳಲಿದೆ. ■